ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ

ಚನ್ನಗಿರಿ .

ಸಿಸಿ ನಂ. **36/2022**

ಹೆಸರುಃ ಚಂದ್ರಶೇಖರ್ .ಕೆ.ಎನ್ ಚಾಸಾಃ 12

ತಂದೆಃ ನರಸಿಂಹನಾಯ್ಕ ಫ್ರಾಸಾ:9

ವಯಸ್ಸುಃ 37

ಉದ್ಯೋಗಃ ಪಿ ಎಸ್ ಐ

ವಾಸ ಸ್ಥಳಃ ಚನ್ನಗಿರಿ

ಸಾಕ್ಷಿಗೆ ದಿನಾಂಕಃ 07.11.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸಸಅ ರವರಿಂದಃ

ದಿಃ **05-10-2021** ರಿಂದ ಇಲ್ಲಿಯವರೆಗೆ ಚನ್ನಗಿರಿಯ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ವ್ಯವ್ಯ ನಿರ್ವಹಿಸುತ್ತಿರುತ್ತೇನೆ .

ದಿಃ 20-10-2021 ರಂದು ಬೆಳಗ್ಗೆ 7.30 ಗಂಟೆಗೆ ನಾನು ಸಿಬ್ಬಂದಿಯವರಾದ ಚಾಸಾ 6 ಮತ್ತು 7 ರವರೊಂದಿಗೆ ಚನ್ನಗಿರಿ ಪಟ್ಟಣದ ಹೊರವಲಯದ ತ್ಯಾವರೆಕೆರೆ ಬಳಿ ಇಲಾಖಾ ಜೀಪಿನಲ್ಲಿ ಗಸ್ತಿನಲ್ಲಿದ್ದಾಗ ಒಬ್ಬ ಆಸಾಮಿ ಒಂದು ಬೈಕ್ ನಲ್ಲಿ ಹೊನ್ನೆಬಾಗಿ ಕಡೆಯಿಂದ ಚನ್ನಗಿರಿಯ ಕಡೆಗೆ ಬರುತ್ತಿದ್ದು ನಮ್ಮ ಇಲಾಖಾ ಜೀಪಿನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ಅವನನ್ನು ಚಾಸಾ 6 ಮತ್ತು 7 ರವರು ಬೈಕ್ ಸಮೇತ ಆತನ ಹೆಸರನ್ನು ಕೇಳಲಾಗಿ ಸುರೇಶ ಯಾನೇ ಯಕ್ಕೇನಹಳ್ಳಿ ಸೂರಿ ಯಾನೆ ಜಾನಿ ತಂದೆ ಬಿನ್ ಬಸವರಾಜಪ್ಪ , 45 ವರ್ಷ , ಲಿಂಗಾಯಿತ ಜನಾಂಗ ಯಕ್ಕನಹಳ್ಳಿ ಗ್ರಾಮ , ಹೊನ್ನಳಿ ತಾಲ್ಲೂಕು ಎಂದು ತಿಳಿಸಿರುತ್ತಾನೆ . ಆತನ ಬಳಿ ಇರುವ ಬೈಕ್ ನ ಬಗ್ಗೆ ವಿಚಾರಿಸಲಾಗಿ ಆತನು ಒಂದು ತಿಂಗಳ ಹಿಂದೆ ಕಬ್ಬಳ ಗ್ರಾಮದ ಮನೆಯ ಮುಂದೆ ನಿಲ್ಲಿಸಿದ್ದ ಹಿರೋಹೂಂಡಾ ಸ್ಪೆಲಂಡರ್ ಪ್ಲಸ್ ಕಂಪನಿಯ ಬೈಕ್ ನ್ನು ಕಳ್ಳತನ ಮಾಡಿ ತನ್ನ ಬಳಿ ಇಟ್ಟುಕೊಂಡಿದ್ದಾಗಿ ತಿಳಿಸಿರುತ್ತಾನೆ . ಸದರಿ ಬೈಕ್ ನ ನೊಂದಣಿ ಸಂಃ ಕೆಎ 17 ಇಬಿ 4087 ಆಗಿರುತ್ತದೆ . ನಂತರ ಆ ಬಗ್ಗೆ ಕೂಲಂಕುಷವಾಗಿ ವಿಚಾರಿಸಲಾಗಿ ಸದರಿ ಬೈಕ್ ಗೆ ಸಂಬಂಧ ಪಟ್ಟ ಹಾಗೆ ಬಸವಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಃ 127/2021 ರಲ್ಲಿ ದಾಖಲು ಆಗಿರುತ್ತದೆ . ನಂತರ ಆರೋಪಿತನನ್ನು ವಿವರವಾಗಿ ವಿಚಾರ ಮಾಡಿ ಆರೋಪಿಯ ಸ್ವಇಚ್ಛೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯು ತನ್ನ ಸ್ವಇಚ್ಛೆ ಹೇಳಿಕೆ ದಿಃ 22-09-2021 ರ ಮಧ್ಯ ರಾತ್ರಿ ಸುಮಾರು 1.30 ಗಂಟೆಯ ಸಮಯದಲ್ಲಿ ಚನ್ನಗಿರಿ ತಾಲ್ಲೂಕಿನ ಗೊಪ್ಪೇನಹಳ್ಳಿ ಗ್ರಾಮಕ್ಕೆ ಹೋಗಿ ಬೀಗ ಹಾಕಿದ ಮನೆಯ ಬೀಗವನ್ನು ಮುರಿದು ಒಳಗೆ ಪ್ರವೇಶ ಮಾಡಿ ಗಾಡ್ರೇಜ್ ಬೀರೂವಿನಲ್ಲಿ ಇದ್ದ ಸುಮಾರು 5 ಗ್ರಾಂ ತೂಕದ ಒಂದು ಜೊತೆ

ಬಂಗಾರದ ಕಿವಿಯೋಲೆ, 5 ಗ್ರಾಂ ತೂಕದ ಒಂದು ಬಂಗಾರದ ಉಂಗುರ ಹಾಗೂ ರೂಃ 55,000/– ನಗದು ಹಣವನ್ನು ಕಳ್ಳತನ ಮಾಡಿರುತ್ತೇನೆ ಎಂದು ತಿಳಿಸಿರುತ್ತಾನೆ .

ದಿಃ 30–08–2021 ರಂದು ಬಿ.ಎಸ್.ಎನ್ . ಎಲ್ ಕಛೇರಿಯ ಕಿಟಕಿ ಗಾಜುಗಳನ್ನು ಒಡೆದು ಒಳ ಪ್ರವೇಶ ಮಾಡಿ ಸುಮಾರು 7 ಮೀ ಉದ್ದದ ಕಾಪರ್ ಕೇಬಲ್ ವೈರ್ ನ್ನು ಕತ್ತರಿಸಿ ಕಳ್ಳತನ ಮಾಡಿಕೊಂಡು ಗುಜರಿ ವ್ಯಾಪಾರಸ್ಥರಿಗೆ ಮಾರಾಟ ಮಾಡಿ ರೂಃ 6000/– ಗಳನ್ನು ಪಡೆದು ಅದರಲ್ಲಿ ರೂಃ 4000/– ಖರ್ಚು ಮಾಡಿ, ಮು.ಮಾಲು ಸಂಃ 1 ರಲ್ಲಿರುವ ರೂಃ 2000/– ಗಳನ್ನು ತನ್ನ ಬಳಿ ಇಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾನೆ.

ನಂತರ ಗೊಪ್ಪೇನಹಳ್ಳಿ ಗ್ರಾಮದ ಪ್ರಕರಣಕ್ಕೆ ಸಂಬಂಧಪಟ್ಟ ಕಳ್ಳತನ ಮಾಡಿದ ವಸ್ತುಗಳಲ್ಲಿ ರೂಃ 55,000/– ಹಣದಲ್ಲಿ ರೂಃ 50,000/– ಖರ್ಚು ಮಾಡಿಕೊಂಡಿದ್ದು, ಮು.ಮಾಲು ಸಂಃ 2 ರಲ್ಲಿ ಇರುವ ರೂಃ 5,000/– ತನ್ನ ಪ್ಯಾಂಟ್ ಜೇಬಿನಲ್ಲಿ ಇದೆ ಎಂದು ತಿಳಿಸಿರುತ್ತಾನೆ . ಕಳ್ಳತನ ಮಾಡಿದ ಮು.ಮಾಲು 3 ಮತ್ತು 4 ರಲ್ಲಿರುವ ಮಾಲುಗಳನ್ನು ತನ್ನ ಬಳಿ ಮಾರಾಟ ಮಾಡುವ ಸಲುವಾಗಿ ಇಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾನೆ .

ನಂತರ ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ಆರೋಪಿಯ ಪತ್ನಿ ಹಾಗೂ ಅವರ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ .

ನಂತರ ಸ್ಥಳಕ್ಕೆ ಪಂಚರಾದ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ಅವರಿಗೆ ಪಂಚರಾಗುವ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಬೆಳಗ್ಗೆ 8.00 ರಿಂದ 9.00 ಗಂಟೆಯ ವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯು 4.5 ಗ್ರಾಂ ತೂಕದ ಕಿವಿಯ ಒಂದು ಜೊತೆ ಕಿವಿಯೊಲೆ ಹಾಗೂ 3.4 ಗ್ರಾಂ ತೂಕದ ಒಂದು ಬಂಗಾರದ ಉಂಗುರ ಹಾಗೂ ರೂಃ 5,000/– (500 ಮುಖ ಬೆಲೆಯ 10 ನೋಟುಗಳು ) ಹಾಗೂ ಗೊಪ್ಪೇನಹಳ್ಳಿ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ನಡೆದಿರುವ ಕಳ್ಳತನಕ್ಕೆ ಸಂಬಂಧಿಸಿದ ರೂಃ 2000/– ( 500 ಮುಖ ಬೆಲೆಯ 4 ನೋಟುಗಳು) ಮತ್ತು ಬಸವಾಪಟ್ಟಣ ಪ್ರಕರಣ ಸಂಃ 127/2021 ಕ್ಕೆ ಸಂಬಂಧಿಸಿದ ಬೈಕ್ ನ ನೊಂದಣಿ ಸಂಃ ಕೆಎ 17 ಇಬಿ 4087 ಹಿರೋ ಹೊಂಡಾ ಸ್ಪೆಲಂಡರ್ ಪ್ಲಸ್ ನ್ನು ಪಂಚರು ಹಾಗೂ ಆರೋಪಿಯ ಸಮಕ್ಷಮ ವಶಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು ಈಗಾಗಲೇ ನಿ ಪಿ 3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 3 ಇ ಎಂದು ಗುರುತಿಸಲಾಯಿತು.

ಅದೇ ಸಮಯದಲ್ಲಿ ತೆಗೆಯಲಾದ ಪೋಟೋಗಳನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿ ಪಿ 4 ರಿಂದ 7 ಎಂದು ಗುರುತಿಸಲಾಗಿರುತ್ತದೆ .

ಪಂಚಾಯಿತಿದಾರರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ಗುರುತಿಸಿದ್ದು, ಸದರಿ ನೋಟಿಸನ್ನು ನಿ ಪಿ 13 ಎಂದು, ಅದರಲ್ಲಿರುವ ಸಹಿಯನ್ನು ನಿ ಪ 13 ಎ ಎಂದು ಗುರುತಿಸಲಾಯಿತು .

ಅದೇ ದಿನ ಆರೋಪಿಯು ಸ್ವಇಚ್ಛೆ ಹೇಳಿಕೆಯ ಕಾಲದಲ್ಲಿ ತಿಳಿಸಿದ ತಾನು ಕಳ್ಳತನ ಮಾಡಿದ ಸ್ಥಳವನ್ನು ಗೊಪ್ಪೇನಹಳ್ಳಿ , ಶಿವಕುಮಾರಸ್ವಾಮಿ ನಗರವಾಸಿಯಾದ ಚಾಸಾ 1 ರವರ ಮನೆಯ ಮುಂಭಾಗದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಬೆಳಗ್ಗೆ 9.30 ರಿಂದ 10.15 ರವರೆಗೆ ಆರೋಪಿಯು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇನೆ . ಸದರಿ ಪಂಚನಾಮೆಯನ್ನು ಈಗಾಗಲೇ ನಿ ಪಿ 8 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 8 ಡಿ ಎಂದು ಗುರುತಿಸಲಾಯಿತು. ಅದರಲ್ಲಿ ಚಾಸಾ 4, 5 ಮತ್ತು 7 ರವರ ಸಹಿಯನ್ನು ಪಡೆದಿರುತ್ತೇನೆ . ಸದರಿ ಪಂಚನಾಮೆಗೆ ಆರೋಪಿಯ ಎಡಗೈ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತೇನೆ . ಚಾಸಾ 11 ರವರಿಂದ ಟೈಪ್ ಮಾಡಿಸಿ ಪ್ರಿಂಟ್ ತೆಗೆಸಿ ಅದರಲ್ಲಿ ಚಾಸಾ 11 ರವರ ಸಹಿಯನ್ನು ಪಡೆದಿರುತ್ತೇನೆ .

ಅದೇ ಸಮಯದಲ್ಲಿ ತೆಗೆಯಲಾದ ಫೋಟೋಗಳನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿ ಪಿ 9 ಎಂದು ಗುರುತಿಸಲಾಗಿರುತ್ತದೆ .

ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ಗುರುತಿಸಿದ್ದು, ಸದರಿ ನೋಟಿಸನ್ನು ನಿ ಪಿ14 ಎಂದು , ಅದರಲ್ಲಿರುವ ಸಹಿಯನ್ನು ನಿ ಪಿ 14 ಎ ಎಂದು ಗುರುತಿಸಲಾಯಿತು .

ನಂತರ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ರಿಮ್ಯಾಂಡ್ ಅರ್ಜಿ ಹಾಗೂ ವರದಿಯನ್ನು ತಯಾರಿಸಿರುತ್ತೇನೆ . ಸದರಿ ವರದಿಯನ್ನು ನಿ ಪಿ 15 ಎಂದು, ಅದರಲ್ಲಿರುವ ಸಹಿಯನ್ನು ನಿ ಪಿ 15 ಎ ಎಂದು ಗುರುತಿಸಲಾಯಿತು .

ನಂತರ ಪ್ರಕರಣದಲ್ಲಿ ವಶಪಡಿಸಿಕೊಂಡ ಮು.ಮಾಲುಗಳನ್ನು, ಪಂಚನಾಮೆ ಹಾಗೂ ಆರೋಪಿಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ಚಾಸಾ 13 ರವರಿಗೆ ನೀಡಿರುತ್ತೇನೆ .ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು – ಆರೋಪಿತರ ಪರ ವಕೀಲರಿಂದ –**

ಆರೋಪಿಯು ಹೊನ್ನೆಬಾಗಿ ಕಡೆಯಿಂದ ಬರುತ್ತಿರುವಾಗ ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆಗೆ ಹೋಗುತ್ತಿದ್ದ ಎಂದರೆ ಸಾಕ್ಷಿಯು ಚಕ್ಕುಬಂಧಿಯನ್ನು ಪಂಚನಾಮೆಯಲ್ಲಿ ನಮೂದುಪಡಿಸಿದ್ದು , ಹೊನ್ನೆಬಾಗಿಯಿಂದ ಚನ್ನಗಿರಿ ಕಡೆಗೆ ಆರೋಪಿತನು ಬರುತ್ತಿದ್ದ ಎಂದು ನುಡಿಯುತ್ತಾರೆ . ಬಿ.ಎಸ್.ಎನ್ ಎಲ್ . ಕಛೇರಿಯಲ್ಲಿ ಎಷ್ಟು ಮೀಟರ್ ಉದ್ದದ ಕಾಪರ್ ವೈರ್ ನ್ನು ಒಳಪಡಿಸಿದ್ದರ ಬಗ್ಗೆ ನನಗೆ ಮಾಹಿತಿ ಇಲ್ಲ . ಸಾಕ್ಷಿಯು ಮುಂದುವರೆದು ಆರೋಪಿತನು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ಹೇಳಿರುವ 7 ಮೀಟರ್ ಉದ್ದದಷ್ಟು ಕಾಪರ್ ವ್ಯರ್ ಎಂದು ನುಡಿಯುತ್ತಾರೆ . ಆರೋಪಿಯು ಖರ್ಚು ಮಾಡಿರುವ ಹಣದ ಬಗ್ಗೆ ನಾನು ವರದಿಯಲ್ಲಿ ನಮೂದು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿಯಿಂದ ನಾನು ಸ್ವ ಇಚ್ಛಾ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ . ಚಾಸಾ 4 ಮತುತ 5 ರವರ ಸಮಕ್ಷಮ ನಾನು

ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ . ಕೃತ್ಯ ಸ್ಥಳದಲ್ಲಿ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಹಾಗೂ ಆರೋಪಿಯಿಂದ ಯಾವುದೇ ಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

( **ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.**)

**ಓ.ಹೇ.ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**